## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂ:59/2019**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | : | ದೇವು | ದಿನಾಂಕ | : | 12/01/2022 |
| ಗಂಡ/ತಂದೆ ಹೆಸರು | : | ಈರೇಗೌಡ | ಸಿ ಡಬ್ಲ್ಯೂ | : | 02 |
| ವಯಸ್ಸು | : | 18 ವರ್ಷ | ಪಿ ಡಬ್ಲ್ಯೂ | : | 02 |
| ಉದ್ಯೋಗ | : | ವಿದ್ಯಾರ್ಥಿ | | | |
| ವಿಳಾಸ | : | ಹೆಚ್ ಆರ್ ಪಿ , ವಡ್ಡರಹಳ್ಳಿ | | | |

ಸಾಕ್ಷಿಯನ್ನು ದಿನಾಂಕ 11.01.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ :-**

1 ನೇ ಆರೋಪಿ ನನ್ನ ದೊಡ್ಡಪ್ಪ , 4 ನೇ ಆರೋಪಿ ನನ್ನ ದೊಡ್ಡಮ್ಮ , 2 ಮತ್ತು 3 ನೇ ಆರೋಪಿಗಳು ನನ್ನ ದೊಡ್ಡಪ್ಪನ ಮಕ್ಕಳು , 5 ನೇ 3 ನೇ ಆರೋಪಿ ಗಂಡ. ಚಾಸಾ 1 ನನ್ನ ತಾಯಿ, ಚಾಸಾ 3 ನನಗೆ ಗೊತ್ತಿಲ್ಲ , ಚಾಸಾ 4 ನನ್ನ ತಂದೆ , ಚಾಸಾ 5 ನನಗೆ ಗೊತ್ತು. ನಾವು ಗೊರೂರಿನಲ್ಲಿ ವಾಸ ಮಾಡುತ್ತಿದ್ದು ದಿನಾಂಕ 06.11.2018 ರಂದು ನೈಗೆರೆ ಗ್ರಾಮಕ್ಕೆ ದೀಪಾವಳಿ ಹಬ್ಬಕ್ಕೆಂದು ನಮ್ಮ ಮನೆಗೆ ಹೋಗಿರುತ್ತೇವೆ. ಆ ದಿನ ಮಧ್ಯಾಹ್ನದಲ್ಲಿ 12 ಗಂಟೆ ಸಮಯದಲ್ಲಿ ನಾವು ಮನೆ ಒಳಗೆ ಇದ್ದಾಗ 1 ನೇ ಅರೋಪಿ ನಮ್ಮ ಮನೆ ಒಳಗೆ ಏಕಾಏಕಿ ಬಂದು ನಮ್ಮ ಅಮ್ಮನಿಗೆ ತಲೆಗೆ ಹೊಡೆದು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಆರೋಪಿ 2 ರಿಂದ 4 ರವರು ನನ್ನ ಅಮ್ಮನಿಗೆ ಜುಟ್ಟು ಹಿಡಿದುಕೊಂಡು ಎಳೆದಾಡಿ ಕೈಗಳಿಂದ ಮೈಕೈಗೆ ಹೊಡೆದರು. ನಾನು ಆರೋಪಿಗಳನ್ನು ಏಕೆ ಹೊಡೆಯುತ್ತಿದ್ದೀರ ಎಂದು ಕೇಳಿ ಜಗಳ ಬಿಡಿಸಿದೆ , ಅದಕ್ಕೆ ಇದೇ ಕೊನೆಯಲ್ಲ ನಿನ್ನನ್ನು ಸಾಯಿಸದೇ ಬಿಡುವುದಿಲ್ಲವೆಂದು ನಮಗೆ ಪ್ರಾಣ ಬೆದರಿಕೆ ಹಾಕಿದರು. ಜಗಳವನ್ನು ನಾನು ಮತ್ತು ನಮ್ಮೂರಿನ ಇನ್ನೊಬ್ಬರು ಬಿಡಿಸಿರುತ್ತೇವೆ. ನನ್ನ ತಾಯಿಗೆ ಗಾಯಗಳಾಗಿದ್ದ ಕಾರಣ ಯಾವುದೋ ಒಂದು ಆಟೋದಲ್ಲಿ ಸರ್ಕಾರಿ ಆಸ್ಪತ್ರೆ, ಅರಕಲಗೂಡಿಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದ್ದೇನೆ. ದೊಣ್ಣೆಯಲ್ಲಿ ಹೊಡೆದ ಕಾರಣ ನನ್ನ ತಾಯಿಗೆ ರಕ್ತಗಾಯವಾಗಿದ್ದು, ಗಲಾಟೆಯಲ್ಲಿ 2 ನೇ ಆರೋಪಿ ನನ್ನ ತಾಯಿಗೆ ಕಾಲಿನಲ್ಲಿ ಒದ್ದರು. ನಾವು ಆಸ್ಪತ್ರೆಯಲ್ಲಿದ್ದಾಗ 5 ನೇ ಆರೋಪಿ ಆಸ್ಪತ್ರೆಗೆ ಬಂದು ಏಕಾಏಕಿ ಅವಾಚ್ಯ ಶಬ್ದಗಳಲ್ಲಿ ಆಸ್ಪತ್ರೆಯಲ್ಲಿ ಹೊಡೆಯಲು ಬಂದರು, ಅಷ್ಟರಲ್ಲಿ ನಾನು ತಡೆದಿರುತ್ತೇನೆ. ನನ್ನ ತಾಯಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನಕ್ಕೆ ಕರೆದುಕೊಂಡು ಹೋದವು. ಆಗ ಪೊಲೀಸರು ಫೋನ್ ಮೂಲಕ ಪೊಲಿಸೀರು ನಮಗೆ ದೂರು ನೀಡಿರುವ ಬಗ್ಗೆ ತಿಳಿಸಿದರು. ಆನಂತರ ನನ್ನ ತಾಯಿ ದೂರು

ನೀಡಿದ್ದಾರೆ. ನನ್ನ ತಾಯಿಗೆ ದೊಣ್ಣೆ ಮೂಲಕ ಹಲ್ಲೆ ಮಾಡಿದ್ದು ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಎಂ ಓ 1 ಎಂದು ಗುರುತಿಸಲಾಯಿತು. ಅದೇ ದೊಣ್ಣೆಯಿಂದ 1 ನೇ ಆರೋಪಿ ನನ್ನ ತಾಯಿಗೆ ಹಲ್ಲೆ ಮಾಡಿರುತ್ತಾರೆ.

ಪಾಟೀ ಸವಾಲುಃ ಡಿ ಆರ್ ವಕೀಲರಿಂದಃ

ಘಟನೆಯಾದಾಗ ನನಗೆ 16 ವರ್ಷ ಎಂದರೆ ಸರಿ. ನಾನು 2019 ರಲ್ಲಿ ಪಿ.ಯು.ಸಿ ವಿದ್ಯಾಭ್ಯಾಸ ಮಾಡುತ್ತಿದ್ದೆ. ನಾನು ಮತ್ತು ನನ್ನ ತಾಯಿ ಹೆಚ್ ಆರ್ ಪಿ ವಡ್ಡರಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ನಾವು ಮನೆಯಲ್ಲಿದ್ದಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇಬ್ಬರೇ ಇದ್ದೆವು. 1 ನೇ ಆರೋಪಿ ಏಕಾಏಕಿ ನಾವು ಮನೆಯಲ್ಲಿದಾಗ ಬಂದು ನಮ್ಮ ಮೇಲೆ ದಾಳಿ ನನ್ನ ತಾಯಿಗೆ ಹೊಡೆದರು. ಏಕಾಏಕಿ ದಾಳಿ ಮಾಡುವ ಮೊದಲು ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ವಾಗ್ವಾದ ನಡೆದಿಲ್ಲ. ನನ್ನ ಪ್ರಕಾರ 1 ನೇ ಅರೋಪಿ ನನ್ನ ತಾಯಿ ತಲೆಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಆರೋಪಿಗಳು ನನ್ನ ತಾಯಿಗೆ ಯಾರು ಯಾರು ಯಾವ ಯಾವ ಭಾಗಕ್ಕೆ ಹೊಡೆದರು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಗಲಾಟೆಯಾಗುವಾಗ ಯಾರು ಇರಲಿಲ್ಲ ಆದರೆ ಗಲಾಟೆ ಶಬ್ದ ಕೇಳಿ ನಂತರ ಬಿಡಿಸಲು ಬಂದಿರುತ್ತಾರೆ. ಗಲಾಟೆಯಾದ ಸ್ಥಳದಲ್ಲಿ ಅಕ್ಕಪಕ್ಕ ಯಾವುದೇ ಮನೆ ಇಲ್ಲ. ನಾನು ಬಿ ಜಿ ಎಸ್ ಕಾಲೇಜಿನಲ್ಲಿ ಓದುತ್ತಿದ್ದೆ , ಆ ರೀತಿ ನನಗೆ ಕಾಲೇಜು ಬೆಳಗ್ಗೆ 9 ರಿಂದ ಸಂಜೆ 5.30 ಗಂಟೆಯವರೆಗೆ ಇತ್ತು. ನಾನು ಸಾಮಾನ್ಯವಾಗಿ ಕಾಲೇಜಿಗೆ ಹೋಗಬೇಕು ಎಂದರೆ ಬೆಳಗ್ಗೆ 7.30 ಮನೆ ಬಿಟ್ಟು ಹೋಗುತ್ತೇನೆ. ಸಂಜೆ 6.30 ಮನೆಗೆ ಹೋಗುತ್ತೇನೆ. ನಾನು 06.11.2018 ರಂದು ಕಾಲೇಜಿಗೆ ಹೋಗಿದ್ದೆ ಎಂದರೆ ಸರಿಯಲ್ಲ, ಆ ದಿನ ರಜೆ ಹಾಕಿದ್ದೆ.

ನಮ್ಮ ಮತ್ತು ಆರೋಪಿಗಳ ನಡುವೆ ಅರಕಲಗೂಡು ಹಿಡಿಯ ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆ ಇದೆ ಎಂದರೆ ಸರಿ. ದಾವೆ ವಿಲೇ ಇರುವ ಕಾರಣ ನಮ್ಮ ಮತ್ತು ಆರೋಪಿಗಳ ನಡುವೆ ಮನಸ್ತಾಪ ಇತ್ತು ಎಂದರೆ ಸರಿ. ಆರೋಪಿಗಳು ನನ್ನ ತಾಯಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ , ಹೊಡೆಯದೇ ಇದ್ದರೂ ಸಹ ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಘಟನೆ ನಡೆದಿಲ್ಲ, ನಾನು ಆ ದಿನ ಶಾಲೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ನನಗೆ ಘಟನೆ ಬಗ್ಗೆ ಯಾವುದೇಮಾಹಿತಿ ಇಲ್ಲದ್ದಿರೂ ಸಹ ನಾನು ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ಮೇಲಿರುವ ದ್ವೇಷದಿಂದ ನಾನು ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಮತ್ತು 5 ನೇ ಅರೋಪಿ ಕೂಡ ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಮತ್ತು ಹೊಡೆಯಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಎಂ ಓ 1 ರಂತಹ ದೊಣ್ಣೆಗಳು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ನಾನು ಹೇಳುವಂತೆ ಆರೋಪಿಗಳು ದೊಣ್ಣೆಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು